ಪ್ರಶ್ನೆಯೂ ದೆವ್ವದ ಹಾಗೆ ಕಾಡಿತು.

ನಾನು ಉಳಿದವರ ಹಾಗೆ ಉರುಟುರುಟಾಗಿ ಇಲ್ಲದೆ ಇದ್ದರೂ ತೆಳ್ಳಗೆ ಬೆಳ್ಳಗೆ ಇದ್ದೇನಲ್ಲ. ಹನ್ನೊಂದು ಮಕ್ಕಳನ್ನ ಹೆತ್ತು, ನಾಲ್ಕು ಮೊಮ್ಮಕ್ಕಳನ್ನು ಎತ್ತಿ ಆಡಿಸಿದರೂ ಇನ್ನೂ ಒಂದು ಹಣ್ಣುಕೂದಲು ತಲೆಯಲ್ಲಿ ಮೂಡಿಲ್ಲ. 'ಇವ್ರು' ಈಗಲೂ ರಾತ್ರಿ ನನ್ನ ಮಗ್ಗಲು ಬಳಚುವುದನ್ನು ಬಿಟ್ಟಿಲ್ಲ. ಕೇಳಿದಾಗಲೆಲ್ಲ ಮೈ ಚಾಚಿದೆ. ಹೇಳಿದಾಗಲೆಲ್ಲ ಹೆತ್ತು ಕೊಟ್ಟೆ. ಅಪ್ಪನ ಮನೆ ಕಾಣದೆ ಎಷ್ಟು ವರ್ಷವಾಯಿತು. ಹಗಲು ರಾತ್ರಿ ಈ ಮನೆ, 'ಇವ್ರ' ಸೇವೆಯೇ ಆಗಿ ಹೋಯಿತು. ಕಂಡವರೆಲ್ಲ ನನ್ನನ್ನ 'ಏನ್ ಚುರ್ಕು', 'ಪಾದರಸ ಇದ್ದಂಗಿದ್ದು.' ಎಂದು ಅವರವರಲ್ಲೆ ಹೇಳಿಕೊಳ್ಳುತ್ತಾರೆ. ಆದರೂ ಎಲ್ಲಕ್ಕಿಂತ ಮನುಷ್ಯನಿಗೆ ಮಾಂಸದ ರುಚಿಯೇ ಹೆಚ್ಚಾಯಿತೆ?

ಇಲ್ಲದೇ ಇದ್ದಲ್ಲಿ ಈ ನಾಗಿ ಬಸುರಾಗಿದ್ದಾದರೂ ಹೇಗೆ? ಗಂಡ ಇಲ್ಲ, ನಮ್ಮ ಮನೆ ಬಿಟ್ಟು ಬೇರೆ ಮನೆ ಕೆಲಸಕ್ಕೆ ಹೋಗುವವಳಲ್ಲ. ಮತ್ತೆ ಬೇರೆಯವರ ಮುಖ ನೋಡುವ ಗಿರಾಕಿಯೂ ಇವಳಲ್ಲ. ಇದೆಲ್ಲ ಹೇಗಾಯಿತು? ಡಜನ್ನುಗಟ್ಟಲೆ ಮಕ್ಕಳನ್ನು ಹುಟ್ಟಿಸಿ ಯೌವನದ ಗೆರೆ ದಾಟಿ ಅಲ್ಲಲ್ಲಿ ಬಿಳಿಗಡ್ಡ ಕಂಡ 'ಇವ್ರ'ದೇ ಕೆಲಸವಾಗಿರಬಹುದೆ? ಛೇ! ಛೇ!

ಈಗಲೂ ಮೂರು ಸಂಜೆ ಹೊತ್ತಿನಲ್ಲಿ ಬಚ್ಚಲು ಬೆಂಕಿ ಆರಿಸಲು ಹೋದರೆ ಹಿಂದಿನಿಂದ ಬಂದು ಚೀಪಿ ಚೀಪಿ ಎದೆಗೊತ್ತಿದ ಮೊಲೆಯನ್ನೇ ನುಣ್ಣಗೆ ತಿಕ್ಕುವ, ಬೆಳಿಗ್ಗೆ ಒಲೆಯ ಮುಂದೆ ಕುಳಿತು ತೆಳ್ಳೇವು ಎರೆಯುವಾಗ ಮೈಕಾಯಿಸುವ ನೆಪದಲ್ಲಿ ಮೈಗೆ ಮೈಹೊಸೆಯುವ, ಮಧ್ಯಾಹ್ನದ ಹೊತ್ತಿನಲ್ಲಿ ಮೆತ್ತು ಗುಡಿಸುತ್ತಾ ಇರುವಾಗ ಸಹಕರಿಸುವ ನೆಪದಲ್ಲಿ ಬಂದು ಲಂಗ ಎತ್ತುವ, ಮಕ್ಕಳ ಮನೆಗೆ ಹೋದರೆ ರಾತ್ರಿ ಜೋಡು ಹಾಸಿಗೆ ಬಿಚ್ಚಿದರೂ ಬೇಡ ಅನ್ನದ 'ಇವ್ರು' ಬೇರೆ ಹೆಣ್ಣಿನ ಅದೂ ನಮ್ಮನೆ ಆಳ್‌ಮಗೂನ ಹಿಂದೆ ಹೋಗಬಹುದೇ? ನಂಬುವುದಕ್ಕೇ ಸಾಧ್ಯವಾಗುತ್ತಿಲ್ಲ. ಆದರೂ ನನಗೆ ಕೊಡುವ ಕಾಟ ನೆನಪಿಸಿಕೊಂಡಾಗ ಮುಪ್ಪಿನ ರಸಿಕತನ ತುಂಬಾ ಅಪಾಯಕಾರಿ ಅನ್ನಿಸಿತು. ಹೌದಾದರೂ ಏನು ಮಾಡುವ ಹಾಗಿದ್ದೆ? ಇದೇನು ಹೊಸದೇ? ಕೊಟ್ಟಿಗೆ ಅಟ್ಟದಲ್ಲಿ, ಹುಲ್ಲಿನ ಬೇಣದಲ್ಲಿ, ಪಂಪಿನ ಮನೆಯಲ್ಲಿ, ಗದ್ದೆ ಮಾಳದಲ್ಲಿ, ಸೊಪ್ಪಿನ ಬೆಟ್ಟದಲ್ಲಿ ನಡೆದ ಇಂತಹ ಎಷ್ಟೋ ಆಟಗಳು ಅದು ಹೇಗೆ ಹೇಗೋ ನನ್ನ ಕಿವಿಯ ಮೇಲೆ ಬಿದ್ದಾಗಲೆಲ್ಲ ಹಿತ್ತಲ ಕಡೆಯ ಅಂಗಳದ ಮೆಟ್ಟಿಲ ಮೇಲೆ ಕುಳಿತು ಮುಸಿ ಮುಸಿ ಸೀರೆಸೆರಗಲ್ಲಿ ಒರೆಸಿಕೊಂಡರೂ ರಾತ್ರಿ ಮತ್ತೆ ಹಾಸಿಗೆಯಲ್ಲಿ ಅರಳಿದ್ದೆ. ಎಷ್ಟಾದರೂ ನಾನು ಸಪ್ತಪದಿ ತುಳಿದ ಹೆಣ್ಣು!.

ಯಾವುದು ಖರೇಯೋ ಯಾವುದು ಸುಳ್ಳೋ ಮೇಲೆ ಕೂತ ಭಗವಂತನೇ ಬಲ್ಲನೆಂದು ಹಣೆ ಮುಟ್ಟಿಕೊಳ್ಳುತ್ತಾ ಏನೇ ಆಗಲಿ 'ತಾಯಿಲ್ಲದ ತಬ್ಬಲಿ, ಒಂದ್ ಜೀವ ಸುಖವಾಗಿ ಎರಡಾಗ್ಲಿ' ಎಂದು ಅಂದುಕೊಳ್ಳುತ್ತ ಒಲೆಯ ಮೇಲೆ ಚಹಕ್ಕೆ ಇಟ್ಟ ನೀರಿನ ನೆನಪಾಗಿ ಒಳಕ್ಕೆ ಹೋದಳು.

***

ಹುಟ್ಟುವ ಸೂರ್ಯ ಮುಳುಗುವ ಸೂರ್ಯ ಅಷ್ಟೇ ಹೊತ್ತಿನ ಲೆಕ್ಕವಾದ ನಾಗಿ ಒಡ್ಡಿ ಬಡಿಸಿಕೊಟ್ಟ ಅನ್ನದ ಚರ್ಗೆ ಎಡಗೈ ಮೇಲೆ ಇಟ್ಟುಕೊಂಡು ಇಳಿಬಿಟ್ಟ ಬಲಗೈಲಿ ಹುಳಿಯ ಬೊಡ್ಡೆಯನ್ನು ಹಿಡಿದು ಯಾವ ಧಾವಂತವೂ ಇಲ್ಲದೆ ಮನೆಯ ದಾರಿಯನ್ನು ಹಿಡಿದಳು.

ಸಂಜೆಗತ್ತಲಲ್ಲಿ ದೀಪದ ಬುಡ್ಡಿ ಬೆಳಕಲ್ಲಿ ಮುರುಗಲ ಹಣ್ಣು ಒಡೆದು ಹುಳಿಸಿಪ್ಪೆ ಮಾಡುತ್ತಾ ಇದ್ದ ಈರಜ್ಜಿಯ ಕಣ್ಣಿಗೆ ಬಿದ್ದಳು. 'ಈಟ್ ಚಂಜಿ ಎಂತಾಕ್ ಮಾಡ್ಕಂಡಿ ಮಗೀ? ಅಂದರೂ ಕೇಳಿಸಿಕೊಳ್ಳಲೇ ಇಲ್ಲವೇನೋ ಎನ್ನುವ ಹಾಗೆ ಗುಡಿಸಲು ಹೊಕ್ಕಳು ನಾಗಿ. ಈ ಕಡೆ ಬಯ್ಯಲಿಕ್ಕೂ, ಆ ಕಡೆ ಸಂತೈಸಲಿಕ್ಕೂ ಆಸ್ಪದವನ್ನೇ ಕೊಡದ ನಾಗಿ ಬೆಳೆದ ಬವಣೆಗಳನ್ನು ನೆನೆಸಿಕೊಳ್ಳುತ್ತ ಈರಜ್ಜಿ ಅವಳ ಗುಡಿಸಲ ತೆರೆದ ಬಾಗಿಲನ್ನೇ ನೋಡುತ್ತಾ ಕುಳಿತುಕೊಂಡಳು.

ಕೊಡ್ಲಕೇರಿಯ ಒಂದು ಹಾಲಕ್ಕಿ ಕುಟುಂಬ ನಾಗಿಯದು. ಅವ್ವ ತೊಳಚಿ (ತುಳಸಿ) ಎರಡು ಹೆಣ್ಣು, ಒಂದು ಗಂಡು ಮಗುವಿನ ತಾಯಿ. ದಾಟು ನೀಟಕ್ಕೆ ಇದ್ದ ಲಕ್ಷಣವಂತ ಹೆಣ್ಣು. ಹಣೆಯಲ್ಲಿ ಕಾಸಗಲ ಕುಂಕುಮ. ಬೊಗಸೆ ತುಂಬುವ ಕೂದಲನ್ನು ಮುಡಿಕಟ್ಟಿ ಗೊಂಡೆ ಹೂವಿನ ದಂಡೆ ಮುಡಿದು, ತೋಳಿಗೆ ಹಿತ್ತಾಳೆ ಕಡಗ, ಕೈ ತುಂಬಾ ಬಳೆ, ಮೊಳಕಾಲ ಕೆಳತನಕ ಸೀರೆ ನೆರಿಗೆ ಮಾಡಿ, ಬಲ ಕಂಕಳ ಬಳಸಿ ಎದೆ ಮುಚ್ಚುವ ಹಾಗೆ ಸೆರಗು ತಂದು ಎಡಗಡೆ ಕತ್ತಿನ ಬಾಜು ಗಂಟು ಹೊಡೆದ ಸೀರೆ, ಕುತ್ತಿಗೆ ತುಂಬ ಹೇರಿಕೊಂಡ ಮಣಿಸರ ಹೊತ್ತು ನಡೆದರೆ ಹೆಜ್ಜೆಯಲ್ಲಿ ಕಲ್ಲು ಕರಗಿಸಬಲ್ಲ ಗತ್ತು. ತಾ ಮುಂದು ತಾ ಮುಂದು ಎಂದು ಕರೆಯುವ ಒಡೆಯರ ಮನೆಯಲ್ಲಿ ಗದ್ದೆ ನೆಟ್ಟಿ ಇರಲಿ, ಕಳೆಕೀಳುವುದಿರಲಿ ಕ್ಷಣ ಕೂರದೆ ಹೊತ್ತು ಕಂತುವವರೆಗೆ ದುಡಿದು ದೀಪ ಹಚ್ಚುವ ಹೊತ್ತಿಗೆ ಮನೆ ಸೇರುವ ತೊಳಚಿ ಲಾಭಕ್ಕಿಂತ ಸೇವೆಯನ್ನೇ ಹೆಚ್ಚು ಒಪ್ಪಿಕೊಂಡವಳು. ಒಂದು ದಿನ ಕಣ್ಮುಚ್ಚಿ ಸೊರಗುವ ಆಷಾಢ ಮಳೆಯಲ್ಲಿ ಗದ್ದೆನೆಟ್ಟಿ ಮುಗಿಸಿ ಬರುವಾಗ ಹುಲ್ಲಿನಲ್ಲಿ ಹರಿದಾಡೊ ಹುಳ ಮುಟ್ಟಿ ಸತ್ತೇಹೋದಳು. ಮಕ್ಕಳು ಪಾಪ ತಾಯಿ ರೂಪವನ್ನು ಕಣ್ತುಂಬಿಕೊಳ್ಳಲಾರದಷ್ಟು ಚಿಕ್ಕವರು.

ನೆಪ ಮಾತ್ರಕ್ಕೆ ಅಪ್ಪ ಅನಿಸಿಕೊಂಡವನು ಜಟ್ಟುಗೌಡ. ಅವನು ಹುಣ್ಣಿಮೆ ಬಂದಾಗ ಒಂದು ರೀತಿ, ಅಮಾವಾಸ್ಯೆ ಬಂದಾಗ ಒಂದು ರೀತಿ. ಮನಸ್ಸು ಬಂದರೆ ದುಡಿಮೆ. ಕೊಟ್ಟೆ ಹೊಟ್ಟೆಗೆ ಸೇರಿಸದೆ ಬಂದ ದಿನ ಮನೆಯಲ್ಲಿ ಊಟ. ಹೀಗೆ ಹೆಸರಿಗಾದರೂ ಇದ್ದ ಅಪ್ಪ ಒಂದು ದಿನ ಅಮಾವಾಸ್ಯೆಯ ರಾತ್ರಿ ಮನೆ ಬಿಟ್ಟವನು ಮತ್ತೆ ಕಣ್ಣಿಗೆ ಬೀಳಲೇ ಇಲ್ಲ.

ಚಿಕ್ಕ ಮಕ್ಕಳು ಒಡೆಯರ ಮನೆ ಬೇಣದಲ್ಲಿರುವ ಗುಡಿಸಲಲ್ಲಿ ಬದುಕುತ್ತಾ, ಹೆಗಡೆ, ಭಟ್ಟರ ಮನೆಯ ಮಕ್ಕಳು ಪಾಟಿಚೀಲ ಬಗಲಿಗೆ ಸಿಗಿಸಿಕೊಂಡು, ಹೂವಿನಂತಹ ಕೊಡೆ ಸೂಡಿಕೊಂಡು ಶಾಲೆಗೆ ಹೋಗುವುದನ್ನು ಬೆರಗುಗಣ್ಣಿಂದ ನೋಡುತ್ತ, ಅವರ ಕಸಮುಸುರೆ ಮಾಡುತ್ತ, ಬಡಿಸಿಕೊಟ್ಟಿದ್ದನ್ನು ಉಣ್ಣುತ್ತ ಬೆಳೆದರು. ಸುಡುವ ಬಡತನಕ್ಕೆ ದಯೆ–ಧರ್ಮದ ಕಣ್ಣೆಲ್ಲವೆನ್ನುವಂತೆ ನಿರ್ದಾಕ್ಷಿಣ್ಯವಾಗಿ ಇವರ ಗುಡಿಸಲನ್ನೂ ಹೊಕ್ಕಿದಾಗ ಕುಡಿದ ಗಂಜಿಯಲ್ಲೇ ಬಳಿದ ಅನ್ನದಲ್ಲೇ ದುಂಡುದುಂಡಾಗಿ ಮಕ್ಕಳು ಬೆಳೆದರು. ನೀಲ್ಕೋಡಿನ ಮಾವನ ಮಗಳ ಮದುವೆಗೆ ಹೋದಾಗ ಕಂಡು ಮೆಚ್ಚಿದ ಗಂಡು ನಾಗಿಯನ್ನು ಮದುವೆಯಾಗಲು ಮುಂದೆ ಬಂದ.

'ಅಪ್ಪ ಅವ್ವಿ ಇಲ್ಲದ ಮಕ್ಳು ಹೀಂಗ್ ಹೆಚ್ ದಿನ ವಡೀದೀರ ಮನೆ ಮೇಯೂಕ್ ಹಾಕೂದು ಸರಿ ಇರೂದೆಲಾ ಈರಮಕ್ಕ. ನಮ್ ಎಚ್ಚರ್ಕೇಲಿ ನಾವ್ ಇರೂದೇ ಈಗಿನ ಕಾಲ್‌ಮಾನ ಏನಂತಿ? ಕೆಂಪಗೆ ಕಾದಾಗ್ಲೆ ಬೆಷ್ಗೆ ಹಾಕ್ಬುಡ್ಬೇಕು ಅಂಬೂದು ನನ್ ಮಾತು. ಆ ತೊಳಚಿ ಮಕ್ಕಳ ಭಾರ ಎಲ್ಲ ನಿನ್ ತೆಲಿಮೆನೆ ಹಾಕೋಗಿದು. ನಂಗಂತೂ ಒಂದೊಂದೆ ಹೊರಿ ಕಳ್ಚಕಂಡ್ರೆ ಸಾಕಾಗಿದು. ನಿಂಗೆ ಹೆಂಗ್ ಅನ್ನಷ್ತಿದ ನೀ ಹೇಳ್ ಈರಮ್ಮಕ್ಕಾ' ಎಂದು ಪಕ್ಕದ ಮನೆಯ ಈರಜ್ಜಿಯೊಡನೆ ಅಂತರಂಗದ ಮಾತನಾಡಿದ ಮಾವ ಮದುವೆ ಶಾಸ್ತ್ರ ಮುಗಿಸಿದ. ಅವ್ವನದೇ ಪಡಿಯಚ್ಚಿನಂತಿರುವ, ಎಳೆಬಾಳೆ ದಿಂಡಿನಂತಿರುವ, ಪಟ್ಟೆ ಕುಂಕುಮವಿಟ್ಟು ಹಸಿರು ಸೀರೆ ಉಟ್ಟ ನಾಗಿ ಗಂಡನ ಹಿಂದೆ ಹಿಂದೆ ಸಾಗಿದಳು. ಅವಳ ವರ್ಷ ಲೆಕ್ಕ ಇಟ್ಟವರ್‍ಯಾರು? ಆಗ ಮಗೀಗೆ ಸುಮಾರು ಹದಿಮೂರೋ ಹದಿನಾಲ್ಕೋ ವರ್ಷ.

'ಈ ಮದುವೆ ನಡೆಸಿದ ಖುಷೀಲಿ ಅಳೀಮಯ್ಯ ಒಳ್ಳೆ ದಾಟ್‌ನೀಟಾಗಿ ಕಲ್‌ಗುಂಡನಾಗಿದ್ದ. ಷೋಕೀನ್ ಪಲೋ ಸಾಕತ್ಯಾ. ಎಲ್ಲ ನಮ್ ನಾಗಿ ಯೋಗ. ಇನ್ ನಾನ್ ನಿಚ್ಚಿಂತನಾದಿ ನೋಡು' ಎಂದು ನಾಗೀನ ಗಂಡನ ಮನೆಗೆ ಬಿಟ್ಟು ಬರುವುದಕ್ಕೆ ಮಾವ ನಾಗಿಯ ತಂಗಿ ತಮ್ಮರ ಜೊತೆಗೆ ಹೋದನು. ಇವರ ಬೆನ್ನ ಹಿಂದೆಯೇ ಹೊರಟ ನಾಗೀನ ಒಪ್ಪಿಸಿ ಅಲ್ಲಿ ಬಿಟ್ಟು ಬರುವುದೇ ದೊಡ್ಡ ಸಾಹಸವಾಯಿತು ಹೋದವರಿಗೆ. ಇನ್ನೇನು ಕಣ್ಣು ತಪ್ಪಿಸಿ ಓಡಿ ಬಂದುದೇ ಸರಿ ಎನ್ನಬೇಕು. ಅದಾದ ಐದಾರು ದಿನದಲ್ಲೇ ನಾಗಿ ಒಂದು ಮಧ್ಯಾಹ್ನ ಮನೆಯ ಬಾಗಿಲಲ್ಲಿ ಪ್ರತ್ಯಕ್ಷವಾದಳು. ದಿನ ಕಳೆದರೂ ಹೊರಗೆಲ್ಲೂ ನಾಗಿ ಸುಳಿವಿಲ್ಲ. ನೋಡಿಯೇ ಬರೋಣವೆಂದು ಒಂದು ದಿನ ಹೊತ್ತು ಕಂತುವ ಹೊತ್ತಿನಲ್ಲಿ ಮನೆ ಒಳಗೆ ಹೊಕ್ಕಳು ಈರಜ್ಜಿ. ಮನೆಯ ಕೋಳುಗಂಬಕ್ಕೆ ಒರಗಿ ಕುಳಿತು ಎಲ್ಲೋ ದೃಷ್ಟಿನೆಟ್ಟು ನಿರ್ಜೀವದಂತೆ ಕುಳಿತಿದ್ದಳು ನಾಗಿ. ಹೋಗಿ ಅಲ್ಲಾಡಿಸಿ ತಲೆ ನೇವರಿಸಿದಾಗ ಈರಜ್ಜಿಯನ್ನು ನೋಡಿದ ನಾಗಿ ಒಮ್ಮೆಲೆ ತೊಡೆಗೆ ಕುಸಿದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

'ಅಲ್ಲಾ ಅಂವ್ನೇನು ಮನ್ಸಾನೇ ರಾಕ್ಷಸಾನೇ ಈರಜ್ಜಿ. ಕಚ್ಚತ್ತಾ, ಬಡ್ಯತ್ತಾ, ಕಾಲ್ ಕಿಸೀತ್ತ. ಅಯ್ಯೋ, ಬ್ಯಾನಿ ತಡೂಕಾಗ್ದೆ ಕೂಗೂಕ್ ನೋಡ್ರೆ, ಬಾಯೇ ಅಬಗೊತ್ತಿ ಹಿಡಿತೀನೆ. ಕಡೀಕೆ ಅಂವ ಒಂದ್ಕಡೆಗೆ ಉಸ್ರು ಬಿಡ್ತಾ ಬಿದ್ಕಂಡ ಮೇನೆ ನಾ ಬಂದ್ ಮೂಲೇಲಿ ಮುದ್ರಿ ಕೂತೇ ಬೆಳ್ಗ ಮಾಡ್ತೀನೇ ಈರಜ್ಜಿ. ಈ ರಾತ್ರಿ ಬಂತೂ ಅಂದ್ರೆ ತಲೆಮೇನಿಂದ ಕಾಲ್‌ತಂಕ ನಡ್ಕ ಬತೀದೆ ನಂಗೆ. ನಾ ಇನ್ ಅಂವ್ನ ಷಂತೀಗೆ ಹೋಗೂಕೆಲ್ಲ ಈರಜ್ಜಿ, ನಾ ಹೋಗೂಕೆಲ್ಲ' ಎಂದು ಕಣ್ಣೀರು ಹರಿಸಿದ್ದೇ ಹರಿಸಿದ್ದು.

ತಾಯಿಲ್ಲದ ತಬ್ಬಲಿ, ತನ್ನ ಬಿಟ್ಟರೆ ಇನ್ಯಾರು